ತಿಂದರು. ಆ ಹಣ್ಣನ್ನು ಅದೆಷ್ಟು ಹೊತ್ತು ಅವರು ತಿನ್ನುತ್ತಲೇ ಇದ್ದರೆಂದರೆ ಅಷ್ಟು ಹೊತ್ತಿನಲ್ಲಿ ನಾನು ಊಟ ಮುಗಿಸಿ ಮಿಕ್ಕ ಬಾಳೆಹಣ್ಣುಗಳನ್ನೂ ತಿಂದುಮುಗಿಸಿದ್ದೆ!

ಇಷ್ಟು ಹೊತ್ತಿಗೆ ಇವರು ನಕಲಿ ಸ್ವಾಮಿ ಅಲ್ಲ ಎಂದು ನನ್ನಷ್ಟಕ್ಕೆ ಖಚಿತ ಮಾಡಿಕೊಂಡಿದ್ದೆ. ಅವರ ಅನುಮತಿ ಪಡೆದು ಅಲ್ಲೇ ಅಡ್ಡಾದೆ. 'ತೊಂದರೆ ಇಲ್ಲವಾದರೆ ತಮ್ಮ ಕುರಿತು ಹೇಳಬಹುದು, ಕೇಳುವ ಆಸಕ್ತಿ ಇದೆ' ಅಂದೆ. ಅದೆಷ್ಟೋ ಹೊತ್ತು ಕಣ್ಣು ಮುಚ್ಚಿ ಕೂತರು. 'ಹೇಳಬಹುದು, ಹೇಳಬಹುದು' ಎಂದರು. ಪುನರುಚ್ಚರಿಸಿದ ಎರಡು ಪದಗಳ ನಡುವೆ ಏನಿಲ್ಲ ಅಂದರೂ ಅರ್ಧ ನಿಮಿಷದಷ್ಟು ಅಂತರವಿತ್ತು.

'ಹತ್ತಿರದ ಊರು ಎಂದೆನಷ್ಟೆ? ಆ ಊರ ಹೆಸರು ಮಾತ್ರ ಕೇಳಬೇಡಿ. ಅದು ಯಾವ ಊರೂ ಆಗಬಹುದು. ಅಪ್ಪ, ಅಮ್ಮ, ಅಣ್ಣ, ಅಕ್ಕ, ತಮ್ಮ, ತಂಗಿ ಎಲ್ಲ ಇದ್ದರು. ದೊಡ್ಡ ಕುಟುಂಬ. ಹೊಲ ಇತ್ತು. ಸಂಬಂಧಿಕರೂ ಇದ್ದರು. ದಾಯಾದಿಗಳೂ. ಎಲ್ಲ ಕಡೆ ಇರುವ ಹಾಗೆ ದಾಯಾದಿಗಳ ನಡುವೆ ಕಚ್ಚಾಟವೂ ಇತ್ತು. ಕೆಲವು ವರ್ಷ ಶಾಲೆಗೆ ಹೋಗಿದ್ದೇನೆ. ಮೂರೋ ನಾಲ್ಕನೆಯದೋ ತರಗತಿಯವರೆಗೆ ಓದಿದೆ. ಆ ಕಾಲಕ್ಕೆ ಪ್ಲೇಗಿನ ಹಾವಳಿ ಬಹಳ. ನಮ್ಮ ಅಪ್ಪ, ಅಮ್ಮ ಒಂದು ವಾರದ ವ್ಯತ್ಯಾಸದಲ್ಲಿ ತೀರಿಕೊಂಡರು. ಒಬ್ಬ ಅಣ್ಣನೂ ತೀರಿಕೊಂಡ. ನಾವು ನಮಗೇ ಅರಿವಿಲ್ಲದೆ ತಬ್ಬಲಿಗಳಾಗಿಬಿಟ್ಟೆವು. ನಮ್ಮದೆಂಬ ಆಸ್ತಿ, ಹೊಲ ಇದೆ, ನಮಗೆ ಕೆಲಸಗಳು ಗೊತ್ತಿಲ್ಲ. ಊರ ದೇವಾಲಯಕ್ಕೆ ಹೋಗಿ ಅಳುತ್ತಿದ್ದೆ. ಈ ದೇವಾಲಯದದಲ್ಲೂ ಒಂದಷ್ಟು ದಿವಸ ಕಳೆದಿದ್ದೇನೆ.'

'ನಮ್ಮ ಅಕ್ಕ ತಂಗಿಯರನ್ನು ಅಜ್ಜಿಮನೆಯವರು ತಮ್ಮ ಊರಿಗೆ ಕರೆದುಕೊಂಡು ಹೋದರು. 'ಗಂಡುಹುಡುಗ ನೀನು, ಗಟ್ಟಿಯಾಗಿ ನೆಲೆ ನಿಲ್ಲಬೇಕಪ್ಪ' ಎಂದು ಹೇಳಿ ಹೊರಟು ಹೋದರು! ಏನು ಹಾಗೆಂದರೆ! ನನಗೊಂದೂ ತಿಳಿಯಲಿಲ್ಲ. ಊರು ಬಿಟ್ಟು ಹೊರಟುಬಿಟ್ಟೆ. ಮಾಗಡಿ, ಬೆಂಗಳೂರು, ಮೈಸೂರು ಯಾವೆಲ್ಲ ಊರು ತಿರುಗಿದ್ದೇನೆ, ಯಾವ ಕೆಲಸ ಸಿಕ್ಕರೂ ಮಾಡಿದ್ದೇನೆ. ಎರಡು ಹೊತ್ತು ತಿನ್ನಲು ಬೇಕಾಗುವಷ್ಟು ಸಿಕ್ಕಿತು, ದೇವರು ದೊಡ್ಡವನು.'

ನಾನು ಸ್ವಾಮೀಜಿ ಮುಖ ನೋಡಿದೆ. ಅವರು 'ದೇವರು ದೊಡ್ಡವನು' ಎಂದುದರಲ್ಲಿ ವ್ಯಂಗ್ಯ ಇದ್ದಿತೇ ಎಂದು ನನ್ನ ಅನುಮಾನ. ಅವರು ಅದರ ಗಡಿಯಲ್ಲೆಲ್ಲೂ ಇರಲಿಲ್ಲ. ತೀರಾ ಆಚೆ... ಇನ್ನೆಲ್ಲೋ... ಅಖಂಡ ವಿಶ್ವಾಸದ ನಂಬಿಕೆಯ ನುಡಿಗಳವು. ತನಗೆ ಎಂಥ ಕಷ್ಟ ಕಾಲದಲ್ಲೂ ಎರಡು ಊಟ, ಮಲಗಲೊಂದು ನೆಲೆ ಕೊಟ್ಟ ದೇವರಿಗೆ ಅವರು ಇನ್ನಿಲ್ಲದಷ್ಟು ಕೃತಜ್ಞರಾಗಿದ್ದರು. 'ಚಿಕ್ಕಂದಿನಲ್ಲೇ ಇಷ್ಟು ಕಷ್ಟ ಕಂಡಿರಿ. ಓದಲಾಗಲಿಲ್ಲ, ನಿಮ್ಮ ಗದ್ದೆ, ಮನೆ ಎಲ್ಲವೂ ಯಾರದೋ ಪಾಲಾಯಿತು. ನೀವೇ ಆಳು ಇಟ್ಟು ಕೆಲಸ ಮಾಡಿಸಬಹುದಾದವರು ಇನ್ನೊಬ್ಬರ ಮನೆಗಳಲ್ಲಿ, ಹೊಲಗಳಲ್ಲಿ ಕೂಲಿಯಾಳಾಗಿ ದುಡಿದಿರಿ. ಈಗಲೂ ಎಲ್ಲೋ ಯಾರೋ ಕರುಣೆಯಿಂದ ಕೊಟ್ಟ ಜಾಗದಲ್ಲಿ ಗುಡಿಸಲು ಹಾಕಿಕೊಂಡು ಬದುಕಿದ್ದೀರಿ. ಅವರು ಎದ್ದು ಹೋಗು ಅಂದ ಕ್ಷಣಕ್ಕೆ ನೀವು ಎದ್ದು ಹೋಗಬೇಕು – ಅಷ್ಟೆ. ಆದರೆ ದೇವರು ದೊಡ್ಡವನು ಅನ್ನುತ್ತೀರಿ!'

ಸ್ವಾಮೀಜಿ ನಕ್ಕರು. 'ನೀವು ಬಹಳ ಸುಖವಾಗಿದ್ದೀರೋ?' ಎಂದರು. 'ಹೇಳಿ ಸರ್, ನಾನು ಊಹಿಸೋ ಪ್ರಕಾರ ನಿಮಗೆ ಮನೆ, ಸಂಸಾರ, ಸಂಬಳ ಎಲ್ಲವೂ ಇವೆ. ನೆಮ್ಮದಿಯಾಗಿದ್ದೀರೋ? ಪ್ರಾಮಾಣಿಕ ಉತ್ತರ ಬೇಕು ನನಗೆ' ಒಮ್ಮೆಲೇ ನಿಷ್ಠುರರಾದರು. 'ನೋಡಿ, ನೀವು ಹೇಳೋದು ಅರ್ಥ ಆಗ್ತಾ ಇದೆ, ಇಲ್ಲ ಅಂತಲ್ಲ. ನನಗೆ ಹೋಲಿಸಿದರೆ ತಾವು ವ್ಯಾವಹಾರಿಕವಾಗಿ ಹೆಚ್ಚು ಭದ್ರವಾಗಿದ್ದೀರಿ. ಆದರೆ ನೀವು ನನ್ನ ಜಾಗದಲ್ಲಿದ್ದರೆ ಏನು ಮಾಡುತ್ತಿದ್ದಿರಿ? ಏನೂ ಇಲ್ಲ. ಯಾವುದೇ ಊರಿರಲಿ, ಎಂಟು ಹತ್ತು ವರ್ಷದ ಹುಡುಗನೊಬ್ಬ ದಿಕ್ಕು ದೆಸೆಯಿಲ್ಲದ ತಬ್ಬಲಿ ಆಗಿಬಿಟ್ಟರೆ ಏನಾಗಬಹುದೋ, ಅದು ನನಗಾಯಿತು. ಆದರೇನಂತೆ, ಎದುರಿಸಿದ್ದೇನೆ. ದುಡಿದು ಉಂಡಿದ್ದೇನೆ, ಸುಳ್ಳೇನು?' ಎಂದರು.

ಸ್ವಾಮೀಜಿ ಹತ್ತಿರಕ್ಕೆ ಬಂದರು. 'ನೀವು ನನಗೆ ತಮ್ಮನಿದ್ದ ಹಾಗೆ' ಎಂದರು. 'ಒಂದು ವಿಷಯ ಹೇಳಲೇ?' ಉತ್ತರಕ್ಕೆ ಕಾಯದೇ ಅವರೇ ಮಾತು ಮುಂದುವರಿಸಿದರು: 'ನನಗೀಗ ನೂರಾನಾಕು ವರ್ಷ, ಒಪ್ಪುತ್ತೀರೇನು?'

ನಾನು ದಿಗಿಲು ಬಿದ್ದೆ. ಆದರೂ ಹೇಳಿದೆ: 'ಇದರಲ್ಲಿ ಒಪ್ಪುವುದು ಎಂದರೇನು? ಒಪ್ಪದಿರುವುದು ಎಂದರೇನು? ನೀವು ಹೇಳುತ್ತಿದ್ದೀರಿ, ನಂಬೋಕೆ ಕಷ್ಟ. ಆದರೆ ನೀವ್ಯಾಕೆ ಸುಳ್ಳು ಹೇಳ್ತೀರಿ? ನಿಮ್ಮನ್ನು ನೋಡಿ ತೊಂಬತ್ತರ ಹತ್ತಿರ ಆಗಿರಬೇಕು ಅಂದುಕೊಂಡಿದ್ದೆ. ಆರೋಗ್ಯ ಚೆನ್ನಾಗಿ ಇಟ್ಟುಕೊಂಡಿದ್ದೀರಿ' ಅಂದೆ. 'ಚೆನ್ನಾಗಿ ಕಾದುಕೊಂಡು ಬಂದಿದ್ದೇನೆ. ಈ ಶರೀರದಿಂದ ಯಾರಿಗೂ ತೊಂದರೆಯಾಗದಿರಲಿ ಎಂಬ ಆಸೆ ನನ್ನದು. ಹಿತ ಭುಕ್, ಮಿತ ಭುಕ್ ಅಂತಾರಲ್ಲ, ಅದೇ ಒಂದು ದೊಡ್ಡ ಸೂತ್ರ ಪಾಲಿಸಿಕೊಂಡು ಬಂದಿದ್ದೇನೆ. ನಿಮಗೆ ಒಂದು ವಿಷಯ ಹೇಳಲೇ, ಈ ದೀರ್ಘಾಯುಷ್ಯ ಇದೆಯಲ್ಲ, ಅದೊಂದು ಶಾಪ ಎನಿಸುತ್ತದೆ, ನನಗೆ.'

'ಅರೆರೆ' ಎಂದೆ. ನಾವೆಲ್ಲ ದೀರ್ಘಾಯುಷ್ಯ ಒಂದು ಪುಣ್ಯದ ಸಂಗತಿ ಎಂದೇ ಭಾವಿಸಿರುವಾಗ ಇವರೇಕೆ ಹೀಗೆ ಹೇಳುತ್ತಾರೆ ಎಂದು ಅಚ್ಚರಿಯೆನಿಸಿತು. ಸೂರ್ಯ ಪಶ್ಚಿಮದೆಡೆ ಚಲಿಸುತ್ತಾ ಬಿಸಿಲು ಅವರು ಕೂತ ಕಡೆಯೇ ಬೀಳುತ್ತಿತ್ತು. ನೆರಳಿದ್ದ ಕಡೆ ಜರುಗಿ ಕೂತರು.

'ನನ್ನ ಮಾತಿನಿಂದ ನಿಮಗೆ ಆಶ್ಚರ್ಯವಾಯಿತೆ? ಶಾಪ ಎಂದು ಯಾಕೆ ಹೇಳಿದೆ, ಗೊತ್ತೆ?' ದೃಷ್ಟಿ ಬೇರೆಡೆ ತಿರುಗಿಸಿ ಹೇಳಿದರು: 'ನೋಡಿ, ದೇವರು ಅಂತ ಒಂದು ಸಂಗತಿ ಇದೆ ಎಂದು ನಂಬಿ ಬದುಕಿದ್ದೇನೆ. ನಮ್ಮ ಗುರುಗಳು ನನ್ನ ಅರವತ್ತೈದನೇ ವರ್ಷದ ಹೊತ್ತಿಗೆ ಕಾವಿಬಟ್ಟೆ ಹಾಕಿಸಿ ದೇಶ ಸುತ್ತು ಅಂತ ಹೇಳಿ ಕಳಿಸಿದರು! ಒಂದು ವರ್ಷ ಗುರುಗಳು ತಮ್ಮೊಡನೆಯೇ ಇಟ್ಟುಕೊಂಡು ಪಾಠ ಹೇಳಿದ್ದಾರೆ. ಒಂದು ದಿನ 'ಇಷ್ಟು ಸಾಕು ಕಣಪ್ಪ, ನಿನ್ನ ಈ ಜನ್ಮಕ್ಕೆ ಬೇಕಾದಷ್ಟಾಯಿತು' ಅಂದು ನನಗೆ ವಿದಾಯ ಹೇಳಿದರು. ನಿಮಗೆ ನಗು ಬರಬಹುದು, ನಾನು ಅಷ್ಟು ದಿನ ಅವರೊಡನಿದ್ದೂ ಅವರ ಹೆಸರು ತಿಳಿಯಲಾಗಲಿಲ್ಲ. ಕೇಳಿದಾಗಲೆಲ್ಲ 'ಅದು ಬೇಕಾಗಿಲ್ಲ ಕಣಪ್ಪ' ಅನ್ನುತ್ತಿದ್ದರು. 'ನಾನು ಯಾವ ಪರಂಪರೆಯಲ್ಲಿದ್ದೀನೋ, ಆ ಪರಂಪರೆಗೆ ನಿನ್ನ ಮೂಲಕ ಒಂದು ಕೊಂಡಿ ಸೇರಿಸಿದೀನಿ, ಕೊಂಡಿಗಳಿಗೆ ಹೆಸರಿರುತ್ತೇನೋ ಹುಚ್ಚಪ್ಪ, ನನಗೂ ಹೆಸರಿಲ್ಲ, ನಿನಗೂ ಹೆಸರಿಲ್ಲ, ನಡಿ ನಡಿ' ಎಂದುಬಿಟ್ಟರು. ಜೀವನದ ದೊಡ್ಡ ಪ್ರವಾಹದಲ್ಲಿ ನನ್ನನ್ನೊಂದು ಅನಾಮಿಕ ಪದಾರ್ಥವಾಗಿಸಿಬಿಟ್ಟರು.'

'ಗುರುಗಳ ಮಾತನ್ನು ಗಂಭೀರವಾಗಿ ನಂಬಿಕೆ, ಶ್ರದ್ಧೆಯಿಂದ ಸಾಕಿಕೊಂಡು ಬಂದಿದೀನಿ. ದೀಕ್ಷೆ ಪಡೆದೇ ನಲವತ್ತು ವರ್ಷಕ್ಕೆ ಹತ್ತಿರ ಬಂತು. ನಡೀತಿದ್ದೇನೆ, ಮುಂದೆಯೂ ನಡೆಯುತ್ತೇನೆ. ಆದರೆ ಏನು, ಇದಕ್ಕೆ ಮುಕ್ತಾಯ ಇಲ್ಲವೇನು ಅನ್ನಿಸ್ತಿದೆ. ನೂರೂ ದಾಟಿ ಮುಂದೆ ಹೋಗ್ತಾ ಇದ್ದೇನೆ.'

'ಎಲ್ಲಿಗೆ?' ಎಂದೆ. ಅವರೂ ನಕ್ಕರು. 'ಎಲ್ಲಿಗೆಂದು ತಿಳಿಯದೇ ಹೋಗ್ತಾ ಇದ್ದೇನೆ. ಅದಕ್ಕೇ ಹೇಳಿದ್ದು, ದೀರ್ಘಾಯುಷ್ಯ ಶಾಪ ಅಂತ. ಶಾಪ ಇನ್ಯಾತಕ್ಕೂ ಅಲ್ಲ – ಅಂತ್ಯ ಬರ್ತಾ ಇಲ್ಲವಲ್ಲ, ಕಾಣುತ್ತಾ ಇಲ್ಲವಲ್ಲ ಅದಕ್ಕೆ.'

ಹೀಗೆ ಹೇಳುತ್ತಾ ಎದ್ದರು. ಅವರ ಕೈಗೆ ದಂಡ ಕೊಟ್ಟೆ. 'ನೀನು ಇಲ್ಲೇ ಇರು. ಸ್ವಲ್ಪ ಹೊತ್ತು ದೇವರ ಮುಂದೆ ಕೂತು ಬರುತ್ತೇನೆ' ಎಂದರು. ಅವರ ಚೀಲದಿಂದ ಒಂದು ಕಾಗದ ತೆಗೆದುಕೊಟ್ಟರು. ತುಂಬ ಭದ್ರವಾಗಿ ಕಾಪಾಡಿಕೊಂಡು ಬಂದಿದ್ದಾರೆ ಅನ್ನಿಸಿತು. ಅವರು ಯಾವುದೋ ಪುಸ್ತಕದ ಬೈಂಡೊಳಗೆ ಆ ಕಾಗದವನ್ನು ಮಡಿಸಿಟ್ಟುಕೊಂಡಿದ್ದರು ಎನ್ನುವುದನ್ನು ಗಮನಿಸಿದೆ. 'ನಮ್ಮ ಗುರುಗಳು ಕೈಯಾರೆ ಬರೆದುಕೊಟ್ಟಿದ್ದು ಅದು. ಅವರ ನೆನಪಿಗೆ ಅಂತ ಇಟ್ಟುಕೊಂಡಿದ್ದೇನೆ. ಸುಮ್ಮನೇ ಓದುತ್ತಾ ಇರು, ಬಂದುಬಿಡ್ತೇನೆ' ಎಂದರು. ನನ್ನನ್ನು ತಮ್ಮನೆಂದು ಕರೆದ ಅವರು ಅದಾವುದೋ ಕ್ಷಣದಲ್ಲಿ ಸಲಿಗೆಯ ಏಕವಚನಕ್ಕೆ ಜಾರಿದ್ದರು. ಅದು ಹಿತವಾಗಿಯೇ ಇತ್ತು.

ಅವರ ಆ ಅಮೂಲ್ಯ ಕಾಗದದಲ್ಲಿ ಎರಡು ಸಾಲುಗಳ ಒಂದು ಶ್ಲೋಕವಷ್ಟೆ ಇದ್ದುದು. ಆದರೆ ಅದರ ಅರ್ಥ ಮಾತ್ರ ತಿಳಿಯಲಿಲ್ಲ. ಭಾಗವತದ ಆರನೇ ಸ್ಕಂಧದ ಶ್ಲೋಕ ಎಂದೂ ಅದರಲ್ಲಿ ಬರೆದಿತ್ತು. ಶ್ಲೋಕ ಹೀಗೆ:

ಅಜ್ಞಾನದಥವಾ ಜ್ಞಾನದುತ್ತಮ ಶ್ಲೋಕ
ನಾಮ ಯತ್
ಸಂಕೀರ್ತಿತಮಘಮ್ ಪುಂಸೋ
ದಹೇದೇಧೋ ಯಥಾನಲಃ

ಸ್ವಾಮಿಗಳು ಬರಲು ಸಮಯವಿತ್ತಾದುದರಿಂದ ಕುತೂಹಲಕ್ಕೆ ಗೂಗಲ್‌ನಲ್ಲಿ ಈ ಶ್ಲೋಕದ ಅರ್ಥ ಹುಡುಕಿದೆ. ಒಂದೆಡೆ ಸಿಕ್ಕೇ ಬಿಟ್ಟಿತು: 'ತಿಳಿದೋ, ತಿಳಿಯದೆಯೋ ಭಗವಂತನ ನಾಮವನ್ನು ಉಚ್ಚರಿಸಿದರೆ, ಬೆಂಕಿ ಒಣಹುಲ್ಲನ್ನು (ದಹನವಾಗುವ ಯಾವುದೇ ಉರಿಯುವ ವಸ್ತು – ಸೌದೆಯೂ ಆಗಬಹುದು) ದಹಿಸುವಂತೆ ಅದು ಮನುಷ್ಯನ ಪಾಪವನ್ನು ಸುಡುತ್ತದೆ.'